ಮೇಲಿನ 4 ರೈಲು ಯೋಜನೆ ಸೂಕ್ಷ್ಮವಾಗಿ ಪರಿಶೀಲಿಸುವುದು, ಮತ್ತು ಕೆ-ರೈಡಿಗೆ ಅಗತ್ಯವಾದ ಹಣ ಒದಗಿಸುವುದು ಹಾಗೂ ಇದರೊಂದಿಗೆ ಇವುಗಳ ದಾಖಲೆಗಳನ್ನು ತಯಾರಿಸುವುದು. ಐಡಕ್ ಸಂಸ್ಥೆಯು ಕೆ-ರೈಡ್ ಕಂಪನಿಯನ್ನು ಸ್ಥಾಪಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು ಈಗ ಅದರ ಕರಡು ವ್ಯವಹಾರಿಕ ಯೋಜನೆಯನ್ನು ತಯಾರಿಸಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ನಾಗಮಂಗಲ ಮತಕ್ಷೇತ್ರದಲ್ಲಿ ಶ್ರೀ ಶ್ರೀನಿವಾಸ ಡಿಸ್ಟಿಲರೀಸ್‌ರವರು ಅನಧಿಕೃತವಾಗಿ ಏರ ವೈಷ್ಣವಿ ನದಿ ನೀರು ಪಡೆಯುತ್ತಿರುವ ವಿಚಾರ.

3006(3812)

ಶ್ರೀ ಚಲುವರಾಯ ಸ್ವಾಮಿ ಎನ್.(ನಾಗಮಂಗಲ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನಾಗಮಂಗಲ ಮತಕ್ಷೇತ್ರದ ಹಾಲಳು ಸರ್ವೆ ನಂ.22ರಲ್ಲಿ ಅನಧಿಕೃತವಾಗಿ ಶ್ರೀ ಶ್ರೀನಿವಾಸ ಡಿಸ್ಟಿಲರೀಸ್‌ರವರು ನಿರ್ಮಾಣ ಮಾಡುತ್ತಿರುವ ಕಟ್ಟಡಕ್ಕೆ ಅನಧಿಕೃತವಾಗಿ ಏರ ವೈಷ್ಣವಿ ನದಿಯ ನೀರು ಉಪಯೋಗಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಬಂದಿದ್ದರೆ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಚ್.ಕೆ.ಪಾಟೀಲ್: (ಜಲಸಂಪನ್ಮೂಲ ಮಂತ್ರಿಗಳು):

ಅ. ಮೆ. ಶ್ರೀ ಶ್ರೀನಿವಾಸ ಡಿಸ್ಟಿಲರೀಸ್ ಪ್ರೈ.ಲಿ., ಸಂಸ್ಥೆಯವರಿಗೆ ಏರ ವೈಷ್ಣವಿ ಹಳ್ಳದಿಂದ ನೀರನ್ನು ಪಡೆಯುವ ಬಗ್ಗೆ ನೀರಿನ ಲಭ್ಯತೆಯನ್ನು ದೃಢಪಡಿಸಿಕೊಂಡು ಸರ್ಕಾರದಿಂದ ಅನುಮೋದನೆ ನೀಡಲಾಗಿದೆ.

ಆ. ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ನಾಗಮಂಗಲ ಮತಕ್ಷೇತ್ರದಲ್ಲಿ ಹೇಮಾವತಿ ಎಡದಂಡೆ ನಾಲೆ(7)ರಲ್ಲಿ ಬಾಕಿ ಇರುವ ಕಾಮಗಾರಿ.

3007(3813)

ಶ್ರೀ ಚೆಲುವರಾಯ ಸ್ವಾಮಿ ಎನ್.(ನಾಗಮಂಗಲ): ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನಾಗಮಂಗಲ ಮತ ಕ್ಷೇತ್ರದಲ್ಲಿ ಹೇಮಾವತಿ ಎಡದಂಡೆ ನಾಲೆ ವಿಭಾಗ 7ರಲ್ಲಿ ಸುಮಾರು ಕಾಮಗಾರಿಗಳ ಕೆಲಸ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರದ ಕ್ರಮವೇನು?

ಆ. ಕಾವೇರಿ ಜಲಾನಯನ ಪ್ರದೇಶಕ್ಕೆ ಸಂಬಳ, ವಾಹನ ನಿರ್ವಹಣೆಗೆ ಇಲ್ಲಿಯವರೆವಿಗೂ ಇಟ್ಟಿರುವ ಹಣದ ಮೊತ್ತವೆಷ್ಟು?

ಇ. ಕಾವೇರಿ ಜಲಾನಯನ ಪ್ರದೇಶದಲ್ಲಿ ಬಾಕಿ ಇರುವ ಕೆಲಸವನ್ನು ಪೂರ್ಣಗೊಳಿಸಲು ಬೇಕಾಗಿರುವ ಹಣವೆಷ್ಟು?

ಶ್ರೀ ಎಚ್.ಕೆ.ಪಾಟೀಲ್ (ಜಲಸಂಪನ್ಮೂಲ ಸಚಿವರು):

ಅ. ಸರ್ಕಾರದ ಗಮನಕ್ಕೆ ಬಂದಿದೆ.

2000-2001ರ ಅಂತ್ಯಕ್ಕೆ ರೂ.495.16 ಲಕ್ಷಗಳ ಮೊತ್ತದ ಕಾಮಗಾರಿಗಳು ಬಾಕಿ ಇರುತ್ತದೆ. ಈ ಉಳಿಕೆ ಕಾಮಗಾರಿಗಳನ್ನು ಟೆಂಡರ್ ಮೂಲಕ ಪೂರ್ಣಗೊಳಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗಿದೆ.

ಆ. ಸಂಬಳಕ್ಕಾಗಿ ರೂ.5243.17 ಲಕ್ಷಗಳು ಮತ್ತು ವಾಹನ ನಿರ್ವಹಣೆಗಾಗಿ ರೂ.569.47 ಲಕ್ಷಗಳು ಒಟ್ಟು ರೂ.5812.64 ಲಕ್ಷಗಳನ್ನು ಕಾದಿರಿಸಲಾಗಿದೆ.

ಇ. ರೂ.3554.00 ಕೋಟಿಗಳು ಬೇಕಾಗಿರುತ್ತದೆ.

ನಾಗಮಂಗಲ ಕ್ಷೇತ್ರದಲ್ಲಿ ಅನಧಿಕೃತವಾಗಿ ವಿದ್ಯುತ್ ಬಳಸುತ್ತಿರುವ ಬಗ್ಗೆ.

3008(3814)

ಶ್ರೀ ಚೆಲುವರಾಯ ಸ್ವಾಮಿ ಎನ್.(ನಾಗಮಂಗಲ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನಾಗಮಂಗಲ ಮತ ಕ್ಷೇತ್ರ ಹಾಲಳ್ಳು ಸರ್ವೆ ನಂ.22ರಲ್ಲಿ ಅನಧಿಕೃತವಾಗಿ ಶ್ರೀ